ಶ್ರೀ ಆರ್. ವೆಂಕಟರಾಮಯ್ಯ.—ಅಧ್ಯಕ್ಷರೇ, ನಾನು ಕೇಳುವುದು ಏನೆಂದರೆ, ಎಲ್ಲಾ ಸಹಕಾರ ಸಂಘಗಳ ಮುಖಾಂತರ ಗ್ರೀನ್ ಕಾರ್ಡ್‌ನ್ನು ಮತ್ತು ಬೇರೆ ಕಾರ್ಡ್‌ನ್ನು ಡಿಸ್ಟ್ರಿಬ್ಯೂಷನ್ ಮಾಡಿಸಬೇಕು. ಒಂದನ್ನು ಎರಡಾದರೂ ಮಾಡಿ, ಪೂರ್ತಿ ಫುಡ್ ಡಿಸ್ಟ್ರಿಬ್ಯೂಷನ್ ಎಲ್ಲಾ ಸಹಕಾರ ಸಂಘಗಳ ಮುಖಾಂತರ ಮಾಡುವುದಕ್ಕೆ ವ್ಯವಸ್ಥೆ ಮಾಡಿ.

ಶ್ರೀ ಆರ್.ಎಲ್. ಜಾಲಪ್ಪ.—ಈ ಗ್ರೀನ್ ಕಾರ್ಡ್‌ನ್ನು ಕೊಡುವುದು, ಫುಡ್ ಡಿಸ್ಟ್ರಿಬ್ಯೂಷನ್ ಮಾಡುವುದು, ಯಾರು ಯಾರಿಗೆ ಎಷ್ಟೆಷ್ಟು ಕೊಡಬೇಕು, ಯಾರು ಯಾರಿಗೆ ಗ್ರೀನ್ ಕಾರ್ಡ್‌ನ್ನು ಕೊಡಬೇಕು, ಯಾವ ರೀತಿ ಕೊಡಬೇಕು ಇದನ್ನೆಲ್ಲಾ ಫುಡ್ ಅಂಡ್ ಸಿವಿಲ್ ಸಪ್ಲೈಸ್ ಡಿಪಾರ್ಟ್‌ಮೆಂಟ್ ನವರು ಮಾಡುತ್ತಾರೆ, ಇದರ ಬಗ್ಗೆ ಅವರು ತೀರ್ಮಾನ ಕೈಗೊಳ್ಳುತ್ತಾರೆ. ಸಹಕಾರ ಸಂಘಗಳ ಸಾಮರ್ಥ್ಯ ನೋಡಿ, ಅದರ ವಯಬಿಲಿಟಿ ನೋಡಿ, ಅಂತಹ ಕಡೆ ಇದನ್ನು ಕೊಡುತ್ತಾರೆ. ನಾವು ಸಹಕಾರ ಸಂಘಗಳಿಗೆ ಸಾಲ ಕೊಡುತ್ತೇವೆ, ಎಲ್ಲಿ ಸಾಲ ತೆಗೆದುಕೊಂಡು ನುಂಗಿ ಹಾಕಿದ್ದಾರೆ, ಅಂತಹ ಕಡೆ ಕ್ರಿಮಿನಲ್ ಆಕ್ಷನ್ ತೆಗೆದುಕೊಂಡಿದ್ದೇವೆ, ಅವರಿಗೆ ಪುನಃ ಸಾಲ ಕೊಡುವುದಕ್ಕೆ ಹೋಗಿಲ್ಲ, ಅಂತಹ ಸಹಕಾರ ಸಂಘಗಳಿಗೆ ಗ್ರೀನ್ ಕಾರ್ಡ್‌ನ್ನು ವಿತರಣೆ ಮಾಡಲು ಕೊಟ್ಟಿಲ್ಲ, ಉಳಿದ ಸಹಕಾರ ಸಂಘಗಳಿಗೆ ಕೊಟ್ಟಿದೆ.

ಅಧ್ಯಕ್ಷರು.—ಶಿವಶೇಖರಪ್ಪಗೌಡ ಶಿರವಾಳ್ (ಶಹಾಪುರ) ಇವರ ಪ್ರಶ್ನೆ ಸಂಖ್ಯೆ ೭೬ (೫೧೮)ನ್ನು ಮುಂದೂಡಲಾಗಿದೆ.

೭೭ (೨೭೦) ಶ್ರೀ ಯು. ಭೂಪತಿ (ಸದಸ್ಯರು ಹಾಜರಿಲ್ಲ)

೭೮ (೭೨) ಶ್ರೀಪತಿ ಮುಖ್ತಾರುನ್ನೀಸಾ (ಸದಸ್ಯೆಯರು ಹಾಜರಿಲ್ಲ)

೭೯ (೫೧) ಶ್ರೀ ಜಿ.ಎಸ್. ಆಚಾರ್ ಇವರ ಪರವಾಗಿ ಶ್ರೀ ಬಸವರಾಜ್ ಇವರು ಕೇಳಬಹುದು.

ಅಕ್ರಮಣಿಗಳ ಸಕ್ರಮೀಕರಣ ಮತ್ತು ದಂಡ ಹೇರಿಕೆ ಬಗ್ಗೆ

೮೯ (೫೧)(೧) ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಕಂದಾಯ, ಯೋಜನಾ ಮತ್ತು ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಬಹುಕಾಲದಿಂದ ಸರಕಾರಿ ಜಮೀನನ್ನು ಅನಧಿಕೃತವಾಗಿ ಸಾಗುವಳಿ ಮಾಡಿಕೊಂಡ ಭೂಹೀನರಿಗೆ, ಕೃಷಿ ಕಾರ್ಮಿಕರಿಗೆ ಹಾಗೂ ಚಿಕ್ಕ ರೈತರಿಗೆ ಅವುಗಳನ್ನು ಸಕ್ರಮಗೊಳಿಸಲು ಸರಕಾರ ತತ್ವಶಃ ಒಪ್ಪಿದ್ದು, ಆ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗುವುದು?

ಆ) ಕುಷ್ಕಿ ಜಮೀನಿಗೂ ಈ ತತ್ವವನ್ನು ಅಳವಡಿಸಲಾಗುವುದೇ?

ಇ) ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲ್ಲೂಕಿನಲ್ಲಿ ಇಂಥ ಬಡ ಅನಧಿಕೃತ ಸಾಗುವಳಿದಾರರಿಗೆ ವಿಪರೀತ (ಟಿಟಫ್ಫೈನ್) ವಿಧಿಸಲಾಗಿದೆ ಎಂಬ ದೂರುಗಳಿದ್ದು ಅದನ್ನು ಕಡಿಮೆ ಮಾಡಲು ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಮತ್ತು ಕಾರ್ಮಿಕ ಸಚಿವರು).—

ಅ) ಸರ್ಕಾರವು ಆದೇಶ ಸಂಖ್ಯೆ ಆರ್‌ಡಿ ೧೦೫ ಎಲ್‌ಜಿಪಿ ೭೭ ದಿನಾಂಕ ೧೯-೯-೧೯೭೭ ಮತ್ತು ಸಂಖ್ಯೆ ಆರ್‌ಡಿ ೨೭ ಎಲ್‌ಜಿಪಿ ೮೧ ದಿನಾಂಕ ೨೭-೩-೧೯೮೧ರ ಪ್ರಕಾರ ಅನಧಿಕೃತವಾಗಿ ಸಾಗುವಳಿ ಮಾಡಿದ ಸರ್ಕಾರಿ ಜಮೀನನ್ನು ಅರ್ಹರಾದ ಭೂಹೀನ ಸಣ್ಣ ಮತ್ತು ಅತಿ ಸಣ್ಣ ರೈತರ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರ ಪರವಾಗಿ ಸಕ್ರಮೀಕರಣಗೊಳಿಸುವ ಸಲುವಾಗಿ ಸರ್ಕಾರ ಸೂಕ್ತ ಕ್ರಮಕೈಗೊಂಡಿರುತ್ತದೆ. ಅಲ್ಲದೆ ಇತ್ತೀಚಿನ ಒತ್ತುವರಿ ಮತ್ತು ಬಗರ್‌ಹುಕುಂ ಸಾಗುವಳಿ ಮಾಡುತ್ತಿರುವ ಜನರಲ್ಲಿ ಅನಿಶ್ಚಿತತೆಯನ್ನು ಹೋಗಲಾಡಿಸಿ ವ್ಯವಸಾಯದ ಕಸುಬನ್ನು ನಿಶ್ಚಿತರೀತಿಯಲ್ಲಿ ಮಾಡಲು ಅನುವಾಗುವಂತೆ ಭೂಕಂದಾಯ ಅಧಿನಿಯಮ, ೧೯೬೪ರ ಕಲಂ ೧೧ಕ್ಕೆ ಸೂಕ್ತ ತಿದ್ದುಪಡಿಯನ್ನು ತಂದು ಈ ಒತ್ತುವರಿ ಮತ್ತು ಬಗರ್‌ಹುಕುಂ ಸಾಗುವಳಿಯನ್ನು ಮಾಡುತ್ತಿರುವ ಜನರಿಗೆ ಸಕ್ರಮಗೊಳಿಸುವ ವಿಷಯವು ಸರ್ಕಾರದ ಪೀಠ್ಯ ಪರಿಶೀಲನೆಯಲ್ಲಿದೆ.

ಅ) ಹೌದು.

ಇ) ಈ ಬಗ್ಗೆ ಸರ್ಕಾರಕ್ಕೆ ಯಾವುದೇ ದೂರು ಬಂದಿರುವುದಿಲ್ಲ. ಕುಂದಾಪುರ ತಾಲ್ಲೂಕಿನಲ್ಲಿ ಯಾವ ಪ್ರಕರಣದಲ್ಲಿಯೂ ಕಾನೂನಿಗೆ ವ್ಯತಿರಿಕ್ತವಾಗಿ ವಿಪರೀತ ದಂಡ ವಿಧಿಸಿರುವುದಿಲ್ಲ. ೧೯೬೪ರ ಭೂ ಕಂದಾಯ ಅಧಿನಿಯಮ ಕಲಂ ೯೪ರ ಪ್ರಕಾರ ನಿಗದಿಪಡಿಸಲಾದ ದಂಡವನ್ನು ಮಾತ್ರ ವಿಧಿಸಲಾಗುತ್ತಿದೆ.

ಅಧ್ಯಕ್ಷರು.—ಮಾನ್ಯ ಜಿ ಎಸ್. ಆಚಾರ್‌ರವರ ಪರವಾಗಿ ಮಾನ್ಯ ಬಸವರಾಜ್‌ರವರು ಪ್ರಶ್ನೆ ಕೇಳಿ.

ಶ್ರೀ ಬಸವರಾಜ್.—ಮಾನ್ಯ ಸಚಿವರು ಸೂಕ್ತ ನಿಯಮಗಳನ್ನು ತರುತ್ತೇವೆಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಯಾವ ವರ್ಷದ ತನಕ ಅಕ್ರಮ ಸಾಗುವಳಿ ಮಾಡಿದವರಿಗೆ ಸಕ್ರಮಗೊಳಿಸುವುದು? ಇನ್ನು ಅನೇಕ ಜನರು ಅರ್ಜಿಯನ್ನು ಸಲ್ಲಿಸದವರು ಇದ್ದಾರೆ. ಹೊಸದಾಗಿ ಅರ್ಜಿಯನ್ನು ಸಲ್ಲಿಸಲಿಕ್ಕೆ ಅವಕಾಶ ಇದೆಯೇ?

ಶ್ರೀ ಎಸ್.ಆರ್. ಬೊಮ್ಮಾಯಿ.—ಈ ಬಗ್ಗೆ ಮಸೂದೆ ಸಭೆಯ ಮುಂದಿದೆ. ೧೯೮೪ರವರೆಗೆ ಸಾಗುವಳಿ ಮಾಡಿಕೊಂಡು ಯಾರು ಅರ್ಜಿ ಸಲ್ಲಿಸಿಲ್ಲವೋ ಅಂತಹವರು ಪುನಃ ಅರ್ಜಿ ಹಾಕಿಕೊಳ್ಳಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಅಂತಹವರಿಗೆ ಭೂಮಿಯನ್ನು ಕೊಡಬೇಕೆಂದು ಅಧಿಕಾರಿಗಳಿಗೆ ತಿಳಿಸಿದ್ದೇವೆ. ಬಗರ್ ಹುಕುಂ ಸಾಗುವಳಿ ಮಾಡಿರುವವರನ್ನು ಯಾರನ್ನೂ ಭೂಮಿಯಿಂದ ಹೊರಗೆ ಹಾಕಕೂಡದೆಂದು ಕಾನೂನು ಈ ಮನೆಯ ಮುಂದಿದೆ. ಆ ಕಾನೂನು ಇಲ್ಲಿಂದ ಪಾಸ್ ಆದಮೇಲೆ ಬಗರ್ ಹುಕುಂ ಸಾಗುವಳಿ ಮಾಡಿರುವವರಿಗೆ ಅನುಕೂಲವಾಗುವಂತೆ ಅವಕಾಶ ಮಾಡಿಕೊಟ್ಟಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಬೊಮ್ಮಾಯಿಯವರು ಬಹಳ ಸರಳವಾದ ಸುಲಲಿತವಾದ ಇನ್ನು ಯಾವುದೇ ಹೊರೆ ಇಲ್ಲದ ರೀತಿಯಲ್ಲಿ ಉತ್ತರ ಕೊಡುತ್ತಾರೆ. ೧೯೭೭ನೇ ಇಸವಿಯಲ್ಲಿ ನಾನು ಕಂದಾಯ ಸಚಿವನಾಗಿದ್ದಾಗ ಬಗರ್ ಹುಕುಂ ಸಾಗುವಳಿ ಮಾಡಿದ್ದರೆ ಅದನ್ನು ಸಕ್ರಮ ಮಾಡಬೇಕೆಂದು ಕಾನೂನು ಮಾಡಿದ್ದೇವೆ. ಆಮೇಲೆ ಮಾನ್ಯ ಖರ್ಗೆಯವರು ೧೯೭೯ರಲ್ಲಿ ಕಂದಾಯ ಸಚಿವರಾಗಿದ್ದಾಗ ಅವರು ಕಾನೂನು ಮಾಡಿದ್ದಾರೆ. ನೀವು ಕಂದಾಯ ಸಚಿವರಾಗಿ ಬಂದಮೇಲೆ ಕಾಂಟ್ರಿಬ್ಯೂಷನ್ ಏನೆಂದರೆ ಯಾರು ಯಾರು ಬಗರ್ ಹುಕುಂ ಸಾಗುವಳಿ ಮಾಡಿದ್ದಾರೆ ಅವರನ್ನು ಹೊರಗೆ ಹಾಕಬೇಡಿ ಎಂದರೆ ಯಾರು ಸಾಹುಕಾರರು ಇದ್ದಾರೆ ಯಾರು ಸಿರಿವಂತರು ಇದ್ದಾರೆ ಯಾರು ಪ್ಲಾಂಟೇಷನ್ ಮಾಡಿದ್ದಾರೆ ಅವರು ಮಾತ್ರ ಅಕ್ರಮ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ೧೯೭೭ರಲ್ಲಿ ಕಾನೂನು ಮಾಡಲಾಗಿದೆ, ೧೯೭೯ರಲ್ಲಿ ಕಾನೂನು ಮಾಡಲಾಗಿದೆ. ಈಗ ಪುನಃ ಮಾಡಿದರೆ ಯಾರು ಭೂಮಿಯನ್ನು ಹೊಂದಿದ್ದಾರೆ ಅಂತಹವರಿಗೆ ಸಕ್ರಮ ಮಾಡಿಕೊಳ್ಳುವುದಕ್ಕೆ ಪುನಃ ಒಳ್ಳೆಯ ದಾಗುತ್ತದೆ. ಇದೇ ರೀತಿ ನಾವಾಡುತ್ತಾ ಹೋದರೆ ಸಮಾಜವಾದಕ್ಕೆ ವಿರೋಧವಾಗುತ್ತದೆ. ಸಮಾಜವಾದವನ್ನು ಇಲ್ಲಿ ಮಾತನಾಡುತ್ತೀರಿ ಇದ್ದವರಿಗೆ ಭೂಮಿಯನ್ನು ಕೊಡುತ್ತಾ ಹೋದರೆ ಸಮಾಜವಾದ ಎಲ್ಲಿರುತ್ತದೆ?

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಬಸವಲಿಂಗಪ್ಪನವರು ಮಸೂದೆ ಇಲ್ಲದೆ ಅದರ ಬಗ್ಗೆ ಚರ್ಚೆ ಮಾಡಬಹುದು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರು ನನ್ನ ಕಡೆಗೆ ಮನವಿ ಕೊಟ್ಟಿದ್ದಾರೆ. ಒಂದು ವರ್ಷದಿಂದ ಅವರು ಒತ್ತಾಯ ತರುತ್ತಿದ್ದಾರೆ. ೧೯೮೧ನೇ ಇಸವಿಯಿಂದ ಇನ್ನು ಸಾವಿರಾರು ಜನ ಅರ್ಜಿಯನ್ನು ಕೊಟ್ಟಿಲ್ಲ. ಭೂರಹಿತರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರು ನನ್ನ ಮನೆಯ ಮುಂದೆ ಸತ್ಯಾಗ್ರಹ ಮಾಡುತ್ತಿದ್ದಾರೆ. ಅವರ ಸಲುವಾಗಿ ಮಾಡುತ್ತಿದ್ದೇನೆ. ಮಸೂದೆ ಬಂದಾಗ ಚರ್ಚೆ ಮಾಡಿ ತಮ್ಮ ಸಲಹೆ ಸೂಚನೆಗಳನ್ನು ಕೊಡಿ.

ಶ್ರೀ ಬಿ. ಬಸವಲಿಂಗಪ್ಪ.—ಹಾಗಾದರೆ ನೀವು ಬಗರ್ ಹುಕುಂ ಮಾಡಿರತಕ್ಕ ಭೂಮಿಯನ್ನು ಸಕ್ರಮಗೊಳಿಸುವುದಾದರೆ ನಿಮ್ಮ ಪ್ರಕಾರ ದಲಿತರು, ಭೂಹೀನರು ಇವರಿಗೆ ಮಾತ್ರ ಭೂಮಿಯನ್ನು ಕೊಡುತ್ತೇವೆಂದು ಬೇರೆಯವರಿಗೆ ಕೊಡುವುದಿಲ್ಲವೆಂದು ನೀವು ದಯಮಾಡಿ ಹೇಳಿದರೆ ನಾನು ಒಪ್ಪುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಸೂದೆಯ ಮೇಲೆ ಚರ್ಚೆ ಮಾಡೋಣ. ತಮ್ಮ ಸಲಹೆಯನ್ನು ತೆಗೆದುಕೊಂಡು ಈ ಮನೆಯಲ್ಲಿ ಎನು ಒಪ್ಪಿಗೆ ಸಿಗುತ್ತದೆ ಅದರಂತೆ ಮಾಡೋಣ.

ಶ್ರೀ ಬಸವರಾಜ್.—ದಂಡ ವಿಧಿಸುತ್ತೇವೆಂದು ಹೇಳಿ ಬಡವರಿಗೆ ಟಿ.ಟಿ.ಫೈನ್ ಏನು ಹಾಕುತ್ತೀರಿ ಆದು ಬಡವರಿಗೆ ಚಾಸ್ತಿಯಾಗುತ್ತದೆ. ಅದನ್ನು ಕಡಿಮೆ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಅದನ್ನು ಪರಿಶೀಲನೆ ಮಾಡೋಣ.

ಕೊಳ್ಳೇಗಾಲ ತಾಲ್ಲೂಕಿನಲ್ಲಿರುವ ಮಹದೇಶ್ವರಸ್ವಾಮಿ ದೇವಸ್ಥಾನದ ಬಗ್ಗೆ

೮೦ (೧೨೫) ಶ್ರೀ ಜಿ. ರಾಜುಗೌಡ (ಹನೂರ್).—ಮಾನ್ಯ ಕಂದಾಯ, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಮೈಸೂರು ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನಲ್ಲಿರುವ ಮಹದೇಶ್ವರಸ್ವಾಮಿ ದೇವಸ್ಥಾನದ ಹಣದಲ್ಲಿ ೧೯೪೪ರಿಂದ ಇಲ್ಲಿಯವರೆಗೆ ಯಾವ ಯಾವ ದೇವಸ್ಥಾನಗಳ ಜೀರ್ಣೋದ್ಧಾರ ಕ್ಕಾಗಿ ಎಷ್ಟೆಷ್ಟು ಹಣವನ್ನು ಮಂಜೂರು ಮಾಡಲಾಗಿದೆ?

ಆ) ಕೊಳ್ಳೇಗಾಲ ತಾಲ್ಲೂಕಿನಲ್ಲಿ ಎಷ್ಟು ದೇವಸ್ಥಾನಗಳ ಜೀರ್ಣೋದ್ಧಾರಕ್ಕಾಗಿ ಹಣ ಬಿಡುಗಡೆ ಮಾಡಲಾಗಿದೆ?

ಇ) ದೇವಸ್ಥಾನದ ವಾರ್ಷಿಕ ಆಯವ್ಯಯ ಪತ್ರದಲ್ಲಿ ಈ ಕಾರ್ಯಕ್ಕಾಗಿ ಹಣ ಮೀಸಲಾಗಿರುವ ಪದ್ಧತಿ ಇದೆಯೇ?

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

ಅ) ೧೯೪೪-೪೫ ರಿಂದ ೩೦-೬-೧೯೪೬ರವರೆಗೆ ರಾಯಚೂರು ಜಿಲ್ಲೆಯ ಈ ಕೆಳಗೆ ಕಾಣಿಸಿರುವ ದೇವಾಲಯಗಳಿಗೆ ಒಟ್ಟು ೪೫,೦೦೦-೦೦ ರೂ.ಗಳನ್ನು ಮಂಜೂರು ಮಾಡಲಾಗಿದೆ.

೧.	ಶ್ರೀ ವೀರಭದ್ರೇಶ್ವರ ದೇವಸ್ಥಾನ, ಯರದೋಣಿಗ್ರಾಮ ಲಿಂಗಸೂರು ತಾಲ್ಲೂಕು.	ರೂ. ೧೫,೦೦೦-೦೦
೨.	ಶ್ರೀ ಅಮರೇಶ್ವರ ದೇವಸ್ಥಾನ, ದೇವರಬಾಪು ಗ್ರಾಮ, ಲಿಂಗಸೂರ್ ತಾಲ್ಲೂಕು.	ರೂ. ೧೫,೦೦೦-೦೦
೪.	ಶ್ರೀ ರಾಮಲಿಂಗೇಶ್ವರ ದೇವಸ್ಥಾನ, ರಾಮತೀರ್ಥ, ಹೊನ್ನಾಳಿ ಗ್ರಾಮ	ರೂ. ೧೫,೦೦೦-೦೦

ಆ) ಈ ದೇವಸ್ಥಾನದ ನಿಧಿಯಿಂದ ಕೊಳ್ಳೇಗಾಲ ತಾಲ್ಲೂಕಿನ ಯಾವ ದೇವಸ್ಥಾನಕ್ಕೂ ಹಣ ಬಿಡುಗಡೆ ಮಾಡಿರುವುದಿಲ್ಲ.

ಇ) ೧೯೪೪-೪೫ನೇ ಸಾಲಿನಿಂದ ಈಚೆಗೆ ಈ ರೀತಿ ಹಣ ಮೀಸಲಿಡಲಾಗುತ್ತಿದೆ.

ಶ್ರೀ ಜಿ. ರಾಜೂಗೌಡ.—೧೯೪೪-೪೫ರಲ್ಲಿ ಎಷ್ಟು ಹಣವನ್ನು ದೇವಾಲಯಗಳ ಜೀರ್ಣೋದ್ಧಾರಕ್ಕಾಗಿ ಮೀಸಲಿಡಲಾಗಿದೆ? ೧೯೪೪-೪೫ರಲ್ಲಿ ಮಹದೇಶ್ವರಸ್ವಾಮಿ ದೇವಸ್ಥಾನದ ವಾರ್ಷಿಕ ಆಯವ್ಯಯ ಪತ್ರದಲ್ಲಿ ಮೈಸೂರು ಜಿಲ್ಲೆಯ ಎಷ್ಟು ದೇವಸ್ಥಾನಗಳಿಗೆ ಜೀರ್ಣೋದ್ಧಾರಕ್ಕಾಗಿ ಹಣವನ್ನು ಬಿಡುಗಡೆ ಮಾಡಲಾಗಿದೆ? ಧರ್ಮದರ್ಶಿಗಳ ಸಭೆಯಲ್ಲಿ ಈ ಹಣವನ್ನು ಬಿಡುಗಡೆ ಮಾಡಲಿಕ್ಕೆ ನಿರ್ಣಯವಾಗಿದ್ದೆಯೇ?

ಶ್ರೀ ಎಸ್.ಆರ್. ಬೊಮ್ಮಾಯಿ.—ಆ ವಿವರಗಳು ನನ್ನ ಹತ್ತಿರ ಇಲ್ಲ.

ಶ್ರೀ ಜಿ. ರಾಜುಗೌಡ.—ಮೈಸೂರು ಜಿಲ್ಲೆಯ ದೇವಸ್ಥಾನಗಳಿಗೆ ಹಣವನ್ನು ಕೊಡದೆ, ರಾಯಚೂರು ಜಿಲ್ಲೆಯ ದೇವಸ್ಥಾನಗಳಿಗೆ ಕೊಟ್ಟಿದ್ದೇವೆಂದು ಹೇಳಿ ಹಣವನ್ನು ದುರುಪಯೋಗ ಮಾಡಿದ್ದಾರೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಮದ್ರಾಸ್ ಎಂಡೋಮೆಂಟ್ ಆಕ್ಟ್ ಪ್ರಕಾರ ಚೆನ್ನಾಗಿ ನಡೆಯತಕ್ಕ ದೇವಾಲಯಗಳಿಂದ ಬೇರೆ ದೇವಾಲಯಗಳಿಗೆ ಜೀರ್ಣೋದ್ಧಾರಕ್ಕಾಗಿ ಹಣವನ್ನು ಕೊಡ ಬಹುದು. ಆ ಪ್ರಕಾರ ರಾಯಚೂರು ಜಿಲ್ಲೆಯ ದೇವಾಲಯಗಳಿಗೆ ಹಣವನ್ನು ಕೊಟ್ಟಿದ್ದಾರೆ.